ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ : 250/2022**

**ಫ್ರಾಸಾ- 12 ಚಾಸಾ- 17**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ದೇವೀರಮ್ಮ |
| ಗಂಡನ ಹೆಸರುಃ | : | ದೊರೆಸ್ವಾಮಿ |
| ವಯಸ್ಸುಃ | : | 53 ವರ್ಷ |
| ಉದ್ಯೋಗಃ | : | ವ್ಯವಸಾಯ |
| ವಾಸ | : | ದೊಡ್ಡಮಂಡಿಗನಹಳ್ಳಿ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:09-02-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಚಾಸಾ-1 ಗೊತ್ತು. ಚಾಸಾ-2 ರಿಂದ 6 ರವರ ಪರಿಚಯವಿದೆ. ಆರೋಪಿತರು ಗೊತ್ತು. ಚಾಸಾ-1 ರವರ ಮಗಳು ದೀಪುವನ್ನು ಆರೋಪಿತರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ಮದುವೆ ನಂತರ ಅವರು ಗಂಡ ಹೆಂಡತಿ ಆರೋಪಿತರ ಮನೆಯಲ್ಲಿ ವಾಸವಿದ್ದರು. ಅವರಿಗೆ ಒಂದು ಮಗು ಇರುತ್ತದೆ. ದೀಪು ಈಗ ಬದುಕಿಲ್ಲ. ಆಕೆ ಹೇಗೆ ತೀರಿಕೊಂಡಳೆಂದು ನನಗೆ ಗೊತ್ತಿಲ್ಲ. ಆರೋಪಿತರು ಆಕೆಗೆ ಮಾನಸಿಕ ದೈಹಿಕವಾಗಿ ವರದಕ್ಷಿಣೆ ವಿಚಾರದಲ್ಲಿ ಕಿರುಕುಳ ಕೊಟ್ಟ ವಿಚಾರ ಗೊತ್ತಿಲ್ಲ. ಆ ಕಾರಣದಿಂದಾಗಿ ಆಕೆ ನೇಣುಹಾಕಿಕೊಂಡ ವಿಚಾರ ಗೊತ್ತಿಲ್ಲ. ಆಕೆಯ ಸಾವಿಗೆ ಕಾರಣ ಏನೆಂದು ನಾನು ಕೇಳಿ ತಿಳಿದುಕೊಂಡಿಲ್ಲ ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ಆರೋಪಿ ದೀಪುವನ್ನು ಮದುವೆಯಾಗುವ ಸಮಯದಲ್ಲಿ ಟೊಯೋಟಾ ಕಂಪೆನಿಯಲ್ಲಿ

ಕೆಲಸ ಮಾಡುತ್ತಿದ್ದ ಎಂದರೆ ನಿಜ. ನಂತರ ಆತ ಕೆಲಸ ಬಿಟ್ಟು ಊರಿಗೆ ಬಂದು ವಾಸವಿದ್ದ ಎಂದರೆ ಗೊತ್ತಿಲ್ಲ. ಆರೋಪಿ ಮೃತಳಿಗೆ ತಾಯಿ ಮನೆಯಿಂದ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಮಾನಸಿಕವಾಗಿ ಮತ್ತು ದೈಹಿಕವಾಗಿ ಕಿರುಕುಳ ಕೊಡುತ್ತಿದ್ದನು ಮತ್ತು ಆಕೆ ರಿಲಯನ್ಸ್ ಗೆ ಕೆಲಸಕ್ಕೆ ಸೇರಿದಾಗ ಆಕೆಯ ನಡತೆ ಮೇಲೆ ಅನುಮಾನಪಟ್ಟು ಗಲಾಟೆ ಮಾಡುತ್ತಿದ್ದನು ಹಾಗೂ ತಾಯಿ ಮನೆಯಿಂದ ಆಸ್ತಿ ಬರೆಸಿಕೊಂಡು ಬಾ ಎಂದು ಹಿಂಸೆ ಕೊಡುತ್ತಿದ್ದ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಹಾಗೆಯೇ ನೀನು ಏನಾದರೂ ಮಾಡಿಕೊಂಡು ಸಾಯಿ ನೀನು ಸತ್ತರೆ ನಾನು ಬೇರೆ ಮದುವೆಯಾಗುತ್ತೇನೆಂದು ಕೂಡ ಕಿರುಕುಳ ಕೊಡುತ್ತಿದ್ದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಈ ಬಗ್ಗೆ ಹಲವಾರು ಬಾರಿ ಚಾಸಾ-1 ಮತ್ತು ಅವರ ಸಂಬಂಧಿಕರು ಆರೋಪಿತರಿಗೆ ಬುದ್ದಿವಾದ ಹೇಳಿದ್ದರು ಎಂದರೆ ಸರಿಯಲ್ಲ.

2.ದಿಃ2-7-22ರಂದು ಮಧ್ಯಾಹ್ನ 1-30 ಗಂಟೆಗೆ ನಾನು ಆರೋಪಿತ ತಂದೆಯ ಜಮಿನಿನ ಪಕ್ಕದಲ್ಲಿ ಗಿಡಗಳನ್ನು ನೆಡಿಸುತ್ತಿದ್ದಾಗ ಆರೋಪಿ ಕೂಗಾಡುವ ಶಬ್ದ ಕೇಳಿ ಅವರ ಮನೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ಅಲ್ಲಿ ಹೋಗಿ ಕೇಳಿದಾಗ ಆರೋಪಿ ತನ್ನ ಹೆಂಡತಿ ಮನೆಯ ಬೆಡ್ ರೂಂ ನಲ್ಲಿ ಬಾಗಿಲಕು ಹಾಕಿಕೊಂಡು ನೇಣುಹಾಕಿಕೊಂಡು ಮೃತಪಟ್ಟಿದ್ದಾಳೆಂದು ತಿಳಿಸಿದರು ಎಂದರೆ ಸರಿಯಲ್ಲ. ನೋಡಿದಾಗ ಆಕೆ ಕಿಟಕಿ ರಾಡಿಗೆ ವೇಲನ್ನು ಕಟ್ಟಿಕೊಂಡು ನೇಣುಹಾಕಿಕೊಂಡಿದ್ದರು ಎಂದರೆ ಸರಿಯಲ್ಲ. ನಂತರ ಅಲ್ಲಿಗೆ ದಿಲೀಪ ಮತ್ತು ಬಸವೇಗೌಡರು ರೂಮಿನ ಬಾಗಿಲನ್ನು ಪಿಕಾಸಿಯಿಂದ ಮೀಟಿ ಬಾಗಿಲು ತೆಗೆದು ಒಳಗೆ ಹೋಗಿ ಆಕೆ ನೇಣ ಹಾಕಿಕೊಂಡಿದ್ದ ವೇಲನ್ನು ಕಟ್ ಮಾಡಿದರು ಮತ್ತು ದೇಹ ಬೆಚ್ಚಗಿದ್ದುದರಿಂದ ರೊಪಿ ಮತುಆ ಅವರ ತಾಯಿ ಯಾವುದೋ ಆಟೋದಲ್ಲಿ ಕರೆದುಕೊಂಡು ಹೊಕೀಾದರು ಎಂದರೆ ಸಾಕ್ಷಿ ಅವರು ಆಟೋದಲ್ಲಿ ಕೂರಿಸಿದ ನಂತರ ನಾನು ಹೋಗಿದ್ದು ಎನ್ನುತ್ತಾರೆ. ನಂತರ ವಿಚಾರ ಮಾಡಿದಾಗ ಆರೋಪಿಯ ಕಿರುಕುಳದಿಂದ ಮನನೊಂದು ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ತಿಳಿಯಿತು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-10 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಂ ಬಿ ವಿ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ..

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**